ಸಾಮಾನ್ಯವಾಗಿವೆ. ಮೊದಮೊದಲು ಪಾಸ್‌ವರ್ಡ್ ಮೂಲಕವಷ್ಟೇ ತೆರೆಯಬಹುದಾಗಿದ್ದ ಸ್ಮಾರ್ಟ್ ಲಾಕ್‌ಗಳಲ್ಲಿ ಈಗ ಆಕ್ಸೆಸ್ ಕಾರ್ಡ್ ಸೌಲಭ್ಯ, ಫಿಂಗರ್‌ಪ್ರಿಂಟ್ ಹಾಗೂ ಫೇಸ್ ಅನ್‌ಲಾಕ್ ಸೌಲಭ್ಯಗಳೂ ಬಂದಿವೆ.

## ವಿದ್ಯುತ್ ನಿರ್ವಹಣೆಗೂ ಡಿಜಿಟಲ್ ಸ್ಪರ್ಶ

ಮನೆ ನಿರ್ಮಿಸುವಾಗಲೇ ವಿದ್ಯುತ್ ನಿರ್ವಹಣೆಗೆ ಡಿಜಿಟಲ್ ಸ್ಪರ್ಶ ಕಲ್ಪಿಸುವುದು ಒಳಿತು. ಯಾಕೆಂದರೆ ಯಾವಾಗ ಎಲ್ಲಿ ಶಾರ್ಟ್ ಸರ್ಕ್ಯೂಟ್‌ನಂತಹ ಘಟನೆಗಳು ಸಂಭವಿಸುತ್ತವೆ ಎನ್ನುವುದು ಗೊತ್ತಾಗುವುದಿಲ್ಲ. ವಿದ್ಯುತ್ ನಿರ್ವಹಣೆಗೆ ಡಿಜಿಟಲ್ ಸ್ಪರ್ಶ ಹೇಗೆ ಅನ್ನೋದು ನಿಮ್ಮ ಪ್ರಶ್ನೆಯಾಗಬಹುದು. ಅದಕ್ಕಿಲ್ಲಿದೆ ಉತ್ತರ. ನಿರ್ಮಾಣ ಹಂತದಲ್ಲಿ ವಿದ್ಯುತ್ ವೈರಿಂಗ್ ಕಾರ್ಯವನ್ನು ಈಗಿನ ಅತ್ಯಾಧುನಿಕ ಪದ್ಧತಿಯಲ್ಲಿ ಅಳವಡಿಸಿಕೊಳ್ಳಬೇಕು. ಅದರ ನಿರ್ವಹಣೆ ವ್ಯವಸ್ಥೆಯನ್ನು ಮೊಬೈಲ್‌ಗಳಿಂದಲೇ ಮಾಡುವಂತಿರಬೇಕು. ತುರ್ತು ಸಂದರ್ಭಗಳಲ್ಲಿ ವಿದ್ಯುತ್ ಹರಿವನ್ನು ಸ್ಮಾರ್ಟ್‌ಫೋನ್ ಮೂಲಕ ಕಟ್ ಆಫ್ ಮಾಡಬಹುದು. ಇದಕ್ಕೆ ಪೂರಕವಾದ ಡಿವೈಎಸ್ ಹಾಗೂ ಎಲೆಕ್ಟ್ರಾನಿಕ್ ವಸ್ತುಗಳು ಮಾರುಕಟ್ಟೆಯಲ್ಲಿ ಲಭ್ಯ.

ಮನೆಗೆ ಅಳವಡಿಸುವ ವಿದ್ಯುತ್ ದೀಪಗಳು, ಎಸಿ, ಗೀಸರ್, ವಾಷಿಂಗ್‌ಮಷಿನ್, ರೆಫ್ರಿಜರೇಟರ್, ಫ್ಯಾನ್‌ಗಳಲ್ಲಿ ಸ್ಮಾರ್ಟ್ ಹಾಗೂ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಇರಲಿ. ತುರ್ತು ಸಂದರ್ಭಗಳಲ್ಲಿ ನೀವು ಮನೆಯಲ್ಲಿ ಇಲ್ಲದಿದ್ದರೂ ಮೊಬೈಲ್ ಮೂಲಕ ಲೈಟ್ಸ್, ಎಸಿ, ಗೀಸರ್, ವಾಷಿಂಗ್‌ಮಷಿನ್, ರೆಫ್ರಿಜರೇಟರ್, ಫ್ಯಾನ್‌ಗಳನ್ನು ಅಗತ್ಯಕ್ಕೆ ತಕ್ಕಂತೆ ಆನ್/ಆಫ್ ಮಾಡಬಹುದು. ಕಣ್ತಪ್ಪಿನಿಂದ ಆಗುವ ವಿದ್ಯುತ್ ಪೋಲನ್ನೂ ತಡೆಯಬಹುದು.

ಸೆನ್ಸರ್ ಆಧರಿತ ಲೈಟಿಂಗ್ಸ್ ವ್ಯವಸ್ಥೆ ಅಳವಡಿಸಿಕೊಂಡರೆ, ನೀವು ಓಡಾಡುವ ಜಾಗದಲ್ಲಿ ಮಾತ್ರ ಲೈಟ್ ಆನ್ ಆಗುತ್ತದೆ. ಹಾಗೇ ಮುಂದೆ ಸಾಗಿದರೆ ಆ ಲೈಟ್ ಆಫ್ ಆಗುತ್ತದೆ. ಲೈಟ್‌ನಲ್ಲಿನ ಸೆನ್ಸರ್ ಮನುಷ್ಯರ ಓಡಾಟವನ್ನು ಗ್ರಹಿಸಿ ಆನ್/ಆಫ್ ಮಾಡುತ್ತದೆ. ಇದರಿಂದ ಅನಗತ್ಯವಾಗಿ ವಿದ್ಯುತ್ ವ್ಯಯ ಆಗುವುದನ್ನು ತಪ್ಪಿಸಬಹುದು. ಸ್ಮಾರ್ಟ್ ಎಲ್‌ಇಡಿಗಳು ಈಗ ಸರ್ವೇಸಾಮಾನ್ಯ. ಜೊತೆಗೆ ಸ್ಮಾರ್ಟ್ ಅಲ್ಲದ ಸಾಧನಗಳನ್ನು ಸ್ಮಾರ್ಟ್




ಮಾಡುವುದಕ್ಕೆ ಸ್ಮಾರ್ಟ್ ಪ್ಲಗ್‌ಗಳು ಬಂದಿವೆ. ಅವುಗಳನ್ನು ಬಳಸಿಕೊಂಡು ವೈಫೈ ಮೂಲಕ ನಾವು ಎಲ್ಲೇ ಇದ್ದರೂ ಯಾವುದೇ ಸಾಧನವನ್ನಾದರೂ ಆನ್ ಅಥವಾ ಆಫ್ ಮಾಡಬಹುದು. ಸ್ಮಾರ್ಟ್ ಎಸಿಗಳು ಹಾಗೂ ಸ್ಮಾರ್ಟ್ ಗೀಸರ್‌ಗಳೆಲ್ಲ ಈಗ ಸಾಮಾನ್ಯವಾಗಿವೆ.

## ರೊಬೋಟಿಕ್ ವ್ಯಾಕ್ಯೂಮ್ ಕ್ಲೀನರ್


ರೊಬೋಟಿಕ್ ವ್ಯಾಕ್ಯೂಮ್ ಕ್ಲೀನರ್ ಇಂದಿನ ಕಾಲದ ಅತ್ಯಗತ್ಯಗಳಲ್ಲೊಂದು. ಕಸ ಗುಡಿಸಲು, ನೆಲ ಒರೆಸಲು ಇವು ನೆರವಾಗುತ್ತವೆ. ಕೆಲ ವರ್ಷಗಳಿಂದ ಮಾರುಕಟ್ಟೆಯಲ್ಲಿದ್ದರೂ ಬಳಕೆಯಲ್ಲಿ ಈಚೆಗೆ ಏರುಗತಿ ಕಾಣುತ್ತಿವೆ. ನಗರ ಪ್ರದೇಶಗಳಷ್ಟೇ ಅಲ್ಲದೆ ಈಗೀಗ ಗ್ರಾಮೀಣ ಪ್ರದೇಶಗಳ ಮನೆಗಳಿಗೂ ಕಾಲಿಟ್ಟಿರುವುದು ಇವುಗಳ ಔಚಿತ್ಯ ಹಾಗೂ ಬಳಕೆಸ್ನೇಹಿ ಗುಣಕ್ಕೆ ಸಾಕ್ಷಿಯಾಗಿದೆ.



ಕಸ ಗುಡಿಸುವುದು, ನೆಲ ಒರೆಸುವುದರಲ್ಲಿ ಆಧುನಿಕ ರೋಬೊಗಳು ಅತ್ಯಂತ ಪರಿಣಾಮಕಾರಿ ರೀತಿಯಲ್ಲಿ ಕೆಲಸ ಮಾಡುತ್ತವೆ. ಸದ್ಯ ಮಾರುಕಟ್ಟೆಯಲ್ಲಿ ಲಭ್ಯವಿರುವ ಸ್ಮಾರ್ಟ್ ರೊಬೋಟಿಕ್ ವ್ಯಾಕ್ಯೂಮ್ ಕ್ಲೀನರ್‌ಗಳನ್ನಂತೂ ಮೊಬೈಲ್ ಬಳಸಿಯೇ ಆಪರೇಟ್ ಮಾಡಬಹುದು. ಇಂತಿಷ್ಟು ಸಮಯಕ್ಕೊಮ್ಮೆ ಕಸ ಗುಡಿಸಬೇಕು ಮತ್ತು ನೆಲ ಒರೆಸಬೇಕು ಎಂಬುದನ್ನು ಇವುಗಳಲ್ಲಿ ಮೊಬೈಲ್ ಮೂಲಕ ಸೆಟ್ ಮಾಡಿದರೆ, ಆಯಾ ಸಮಯಕ್ಕೆ ಅವು ವಹಿಸಿದ ಕೆಲಸವನ್ನು ಮಾಡುತ್ತವೆ. ತಲುಪಲು ಸಾಧ್ಯವಿರುವ ಜಾಗವನ್ನೆಲ್ಲ ಸ್ವಚ್ಛಗೊಳಿಸುವ ಈ ರೋಬೊಗಳು ಮೆಟ್ಟಿಲುಗಳನ್ನು ಹತ್ತಿ, ಇಳಿದು ಕೆಲಸ ಮಾಡುತ್ತವೆ. ಇದಕ್ಕೆಂದೇ ಲಿಡಾರ್ ಸೆನ್ಸರ್‌ಗಳನ್ನು ಅಳವಡಿಸಿದ್ದು, ಇವುಗಳು ಮೆಟ್ಟಿಲುಗಳ ಆಳ, ಎತ್ತರವನ್ನು ಅಳತೆ ಮಾಡಿ ನಾಜೂಕಾಗಿ ಇಳಿಯುತ್ತವೆ ಮತ್ತು ಹತ್ತುತ್ತವೆ. ಏಕಾಏಕಿ ಜಿಗಿಯುವುದಿಲ್ಲ, ಧುಮುಕುವುದಿಲ್ಲ. ಕೆಲಸ ಮುಗಿದ ನಂತರ ತಾನು ಬಳಸಿದ ಸ್ಪಾಂಜ್ ಅಥವಾ ಬಟ್ಟೆಯನ್ನೂ ತಾನೇ ಸ್ವಚ್ಛಗೊಳಿಸುವ ಕೌಶಲ ಹೊಂದಿವೆ. ನಿಗದಿತ ಜಾಗಕ್ಕೆ ಹೋಗಿ, ಬ್ಯಾಟರಿಯನ್ನು ಚಾರ್ಜ್‌ಗೆ ಹಾಕಿಕೊಳ್ಳುತ್ತವೆ.

## ವಾಯ್ಸ್ ಅಸಿಸ್ಟೆಂಟ್‌ಗೆ ಇರಲಿ ಆದ್ಯತೆ

ತನ್ನ ಕಾರ್ಯವ್ಯಾಪ್ತಿಯಲ್ಲಿ ಏನೇ ಹೇಳಿದರೂ ಮಾಡುವ ಸಾಮರ್ಥ್ಯ ಹೊಂದಿರುವ ಈ ಸ್ಮಾರ್ಟ್ ವಾಯ್ಸ್ ಅಸಿಸ್ಟೆಂಟ್‌ಗಳು, ಜನರ ಆತ್ಮೀಯ ಸಂಗಾತಿಗಳಾಗಿಯೂ ಗುರುತಿಸಿಕೊಂಡಿವೆ. ಅಮೆಜಾನ್‌ನ ಅಲೆಕ್ಸಾ, ಆ್ಯಪಲ್‌ನ ಸಿರಿ, ಗೂಗಲ್‌ನ ಗೂಗಲ್ ಅಸಿಸ್ಟೆಂಟ್ ಚಾಲ್ತಿಯಲ್ಲಿರುವ ಪ್ರಮುಖ ವಾಯ್ಸ್ ಅಸಿಸ್ಟೆಂಟ್‌ಗಳಾಗಿವೆ. ಇವುಗಳು ತಮ್ಮೊಂದಿಗೆ



ಸಂಪರ್ಕಗೊಂಡಿರುವ ಮನೆಯೊಳಗಿನ ಸ್ಮಾರ್ಟ್ ಡಿವೈಸ್‌ಗಳೊಂದಿಗೆ ಸಲೀಸಾಗಿ ವ್ಯವಹರಿಸುತ್ತವೆ. ಸ್ಮಾರ್ಟ್ ಡಿವೈಎಸ್‌ಗಳನ್ನು ಆನ್ ಮಾಡುವ, ಆಫ್ ಮಾಡುವ ಕಾರ್ಯದಿಂದ ಹಿಡಿದು ಮನೆಯ ಸದಸ್ಯರ ಮೂಡ್‌ಗೆ ತಕ್ಕಂತೆ ವರ್ತಿಸುವ ಕೌಶಲ ಹೊಂದಿವೆ. ಜನರ ಮೂಡ್‌ಗೆ ತಕ್ಕಂತೆ ಹಾಡುಗಳನ್ನು ಪ್ಲೇ ಮಾಡುವ, ಅಗತ್ಯವಿರುವ ಆ್ಯಪ್‌ಗಳನ್ನು ವಾಯ್ಸ್ ಕಮಾಂಡ್ ಮೂಲಕ ಓಪನ್ ಮಾಡುವ ವಾಯ್ಸ್ ಅಸಿಸ್ಟೆಂಟ್‌ಗಳು, ನಗರ ಪ್ರದೇಶಗಳ ಮನೆಗಳ ಅವಿಭಾಜ್ಯ ಅಂಗವಾಗಿವೆ. ನಾವು ಕೇಳಿದ ಪ್ರಶ್ನೆಗಳಿಗೆ ಉತ್ತರಿಸುವ ಇವು, ಗ್ರಾಮೀಣ ಪ್ರದೇಶಗಳ ಮನೆಗಳಲ್ಲೂ ಮಾತನಾಡುತ್ತಿರುವುದು ಆಶ್ಚರ್ಯ ತರಿಸುತ್ತದೆ. ಈಗಂತೂ ಕೃತಕ ಬುದ್ಧಿಮತ್ತೆ ಆಧರಿತ ವಾಯ್ಸ್ ಅಸಿಸ್ಟೆಂಟ್‌ಗಳು ಮೊಬೈಲ್‌ನಲ್ಲೇ ಸಿಗುತ್ತಿದ್ದು, ಇವು ಇನ್ನಷ್ಟು ಬೆರಗು ಹುಟ್ಟಿಸುತ್ತವೆ.

## ಸ್ಮಾರ್ಟ್ ಲಿಫ್ಟ್

ಹೋಟೆಲ್, ಮಾಲ್, ವಾಣಿಜ್ಯ ಸಂಕೀರ್ಣಗಳಲ್ಲಷ್ಟೇ ಕಾಣುತ್ತಿದ್ದ ಲಿಫ್ಟ್‌ಗಳು ಈಗ ಮನೆಗಳಿಗೂ ಕಾಲಿಟ್ಟಿವೆ. ಅದರಲ್ಲೂ ಸ್ಮಾರ್ಟ್ ಆಗಿ ಕಾರ್ಯನಿರ್ವಹಿಸುವ ಲಿಫ್ಟ್‌ಗಳಿಗಂತೂ ಈಗ ಮನೆ ಕಟ್ಟುವವರು ಹೆಚ್ಚಿನ ಆದ್ಯತೆ ನೀಡುತ್ತಿದ್ದಾರೆ. ಮನೆಗಳಲ್ಲಿ ಅಳವಡಿಸುವ ಸ್ಮಾರ್ಟ್ ಲಿಫ್ಟ್‌ಗಳನ್ನು ಒಮ್ಮೆಗೆ ಒಂದಿಬ್ಬರಷ್ಟೇ ಬಳಸಬಹುದು. ಮನೆಯಲ್ಲಿ ಹಿರಿಯರಿಗಂತೂ ಇವು ತುಂಬಾ ಸಹಕಾರಿ.

ಹಿರಿಯಲು ಮೆಟ್ಟಿಲು ಹತ್ತಿ, ಇಳಿಯುವಾಗ ಜಾರಿ ಬೀಳುವುದು, ಮಂಡಿ ನೋವು ಬರುವ ಸಾಧ್ಯತೆಯೂ ಇರುತ್ತದೆ. ಇದಕ್ಕೆ ಪರಿಹಾರವಾಗಿ ಸ್ಮಾರ್ಟ್ ಲಿಫ್ಟ್‌ಗಳನ್ನು ಬಳಸಬಹುದು. ಈ ಲಿಫ್ಟ್‌ಗಳಲ್ಲಿ ಸುರಕ್ಷತೆಯ ದೃಷ್ಟಿಯಿಂದ ಪಾಸ್‌ವರ್ಡ್ ಲಾಗಿನ್ ಆಯ್ಕೆಯನ್ನೂ ಕಲ್ಪಿಸಲಾಗಿದೆ. ಮಕ್ಕಳು ಸುಖಾಸುಮ್ಮನೆ ಇವುಗಳನ್ನು ಬಳಸಿ ಅಪಾಯಕ್ಕೀಡಾಗುವ ಸಂಭವವನ್ನು ತಪ್ಪಿಸಬಹುದು. ಬಾಡಿಗೆಗಾಗಿ ಮನೆಗಳನ್ನು ಕಟ್ಟಿಸುವವರಂತೂ ನಿರ್ದಿಷ್ಟ ಮಹಡಿಗೆ ತಲುಪಲು ನಿರ್ದಿಷ್ಟ ಪಾಸ್‌ವರ್ಡ್ ಸಹ ಅಳವಡಿಸಿಕೊಳ್ಳುವುದರಿಂದ ಅನಗತ್ಯವಾಗಿ ಯಾರ್‍ಯಾರೋ ಒಳಗೆ ಪ್ರವೇಶಿಸುವುದನ್ನು ತಪ್ಪಿಸಬಹುದು.